ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/513/ಎಸಿಎಂ(2)/2017-18

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ:11-02-2019.

## -::: ಜ್ಞಾಪನ :::-

**ವಿಷಯ:** 2018-19ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶಾತಿ ಪ್ರಕಿಯೆಯಲ್ಲಿ ಅನ್ಯಕಾರ್ಯನಿಮಿತ್ತ ಕಾರ್ಯ ನಿರ್ವಹಿಸಿದ ಉಪನ್ಯಾಸಕರು/ ಸಿಬ್ಬಂದಿಯವರು ಟಿ.ಎ/ಡಿ.ಎ ಪಡೆಯುವ ಬಗ್ಗೆ.

**ಉಲ್ಲೇಖ:**
1. ಈ ಕಛೇರಿ ಸಮಸಂಖ್ಯೆ ಜ್ಞಾಪನ ಪತ್ರ ದಿ:07-06-2018 & 15-06-2018.
2. ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಅಫಜಲಪೂರ ಇವರ ಪತ್ರ ಸಂ. ಸಪಾಅ/ /ಲೆಕ್ಕ/2018-19/688, ದಿ:05-02-2019.

-0000000-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **2018-19ನೇ** ಸಾಲಿನ ರಾಜ್ಯದಲ್ಲಿನ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ **"ನೋಡಲ್ ಸೆಂಟರ್" ಗಳಲ್ಲಿ** ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಲಿಂಗ್ ಮೂಲಕ ಪ್ರಥಮ ಡಿಪ್ಲೋಮಾ ಪ್ರವೇಶಾತಿ ಪ್ರಕ್ರಿಯಗೆ ಸಂಬಂಧಿಸಿದ ಪೂರ್ವಭಾವಿ ಸಿದ್ಧತೆಗಳನ್ನು ಹಾಗೂ ಪ್ರವೇಶ ಸಂಬಂಧ ಎಲ್ಲಾ ಉಸ್ತುವಾರಿಯನ್ನು ನೋಡಿಕೊಳ್ಳಲು ಅಧಿಕಾರಿಗಳನ್ನು ನಿರ್ದೇಶಕರ ನಾಮನಿರ್ದೇಶಿ ಕಾರ್ಯ ನಿರ್ವಹಿಸಲು ಉಲ್ಲೇಖ(1)ರ ದಿ:07-06-2018ರಂದು ನಿಯೋಜಿಸಲಾತ್ತು ಹಾಗೂ ಸದರಿ ಪ್ರವೇಶ ಪ್ರಕ್ರಿಯೆಗೆ ಅಗತ್ಯ ಇರುವ ಉಪನ್ಯಾಸಕರು / ಸಿಬ್ಬಂದಿಯವರನ್ನು ಸಮೀಪ ಪಾಲಿಟೆಕ್ನಿಕ್‌ಗಳಿಂದ ಅನ್ಯಕಾರ್ಯನಿಮಿತ್ತ ನಿಯೋಜಿಸಿಕೊಳ್ಳಲು ಉಲ್ಲೇಖ(1)ರ ದಿ:15-06-2018ರ ಈ ಕಛೇರಿ ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು.

ಈ ಹಿನ್ನಲೆಯಲ್ಲಿ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಯಲ್ಲಿ ಅನ್ಯಕಾರ್ಯನಿಮಿತ್ತ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸಿದ ಉಪನ್ಯಾಸಕರು / ಸಿಬ್ಬಂದಿಯವರಿಗೆ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಬಿಲ್ಲುಗಳಿಗೆ ಮೇಲು ರುಜು ಪಡೆಯಲು ಉಲ್ಲೇಖ(2)ರ ಪ್ರಾಂಶುಪಾಲರು ಅನುಮತಿ ಕೋರಿರುವುದನ್ನು ಪರಿಶೀಲಿಸಿ ಕೆಳಕಂಡಂತೆ ಅನುಮತಿ ನೀಡಲಾಗಿದೆ.

ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ "ನೋಡಲ್ ಸೆಂಟರ್" **ಗಳಲ್ಲಿ** ಪ್ರವೇಶ ಪ್ರಕ್ರಿಯೆ ಮುಕ್ತಾಯವಾಗುವವರೆಗೂ ಅನ್ಯಕಾರ್ಯನಿಮಿತ್ತ ಕಾರ್ಯ ನಿರ್ವಹಿಸಿದ ಅರ್ಹ ಉಪನ್ಯಾಸಕರು / ಸಿಬ್ಬಂದಿವರ್ಗದವರು ಕೆ.ಸಿ.ಎಸ್. ನಿಯಮಗಳ ಪ್ರಕಾರ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಕ್ಲೇಮು ಮಾಡಿ ಪಡೆಯಬಹುದಾಗಿದೆ.

ನಿರ್ದೇಶಕರು

11/02/19

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ,

**ಪ್ರತಿ:**

1. ಲೆಕ್ಕಾಧಿಕಾರಿಗಳು (ಬಿಲ್ಸ್), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ಬಿಎಲ್‌ಎಸ್(1) ಉಪಭಾಗಕ್ಕೆ.
3. ಕಛೇರಿ ಪ್ರತಿ.